ದಿನಾಂಕಃ- **24.02.2023** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು- ಎದುರುದಾರರ ಪರ ವಕೀಲರಿಂದಃ-</u>**

ನನ್ನ ತಂದೆಗೆ ಒಟ್ಟು **4** ಜನ ಮಕ್ಕಳು. ನಾನು **3** ನೆಯವಳು. ಉಳಿದ ಇಬ್ಬರಿಗೆ ಮದುವೆಯಾಗಿರುತ್ತದೆ. ನನ್ನ ತಂದೆ ವ್ಯವಸಾಯ ಮಾಡುತ್ತಾರೆ. ನನ್ನ ತಂದೆಗೆ ಸಂಬಂಧಪಟ್ಟಂತೆ ಸ್ವಂತ ಜಮೀನು **5** ಎಕರೆ ಇದೆ. ನನ್ನ ತಂದೆಗೆ ವರ್ಷಕ್ಕೆ ಎಷ್ಟು ಆದಾಯ ಬರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ನಾನು ಪ್ರಸ್ತುತ ಎಲ್ಲಿಯು ಕೆಲಸಕ್ಕೆ ಹೋಗುತ್ತಿಲ್ಲ. ನಮಗೆ **5** ಎಕರೆ ಜಮೀನು ಇಲ್ಲ ಎಂದರೆ ಸರಿಯಲ್ಲ. ನಮಗೆ ಬೇರೆ ಬೇರೆ ಮೂಲಗಳಿಂದ ಆದಾಯ ಅಂದರೆ ಹೈನುಗಾರಿಕೆ ಯಿಂದ ಮತ್ತು ಸಾಕಷ್ಟು ಆದಾಯ ಇದೆ ಎಂದರೆ ಸರಿಯಲ್ಲ. ನಾನು ಬೇರೆ ಕಡೆ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಜೊತೆ ಸುಮಾರು **10** ತಿಂಗಳು ಜೀವನ ಮಾಡಿರುತ್ತೇನೆ. ಮದುವೆ ಸಮಯದಲ್ಲಿ ನಮ್ಮ ಪೋಷಕರು **150** ಗ್ರಾಂ ಚಿನ್ನದ ಒಡವೆಗಳು ಹಾಗೂ **1,50,000 ರೂ,** ಗಳನ್ನು ಕೊಟ್ಟು ಮದುವೆ ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಪೋಷಕರು ನನ್ನ ಅಕ್ಕಂದಿರಿಗೆ ಮದುವೆ ಮಾಡಿ ನನಗೆ ಅಷ್ಟು ಹಣ ಖರ್ಚು ಮಾಡಿ ಮದುವೆ ಮಾಡುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. **150** ಗ್ರಾಂ ಚಿನ್ನದ ಒಡವೆ ಬಗ್ಗೆ ಬಿಲ್ಲುಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಎದುರುದಾರರೆ ಹಣವನ್ನು ಖರ್ಚು ಮಾಡಿ ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಜಗಳ ಮಾಡಿಕೊಂಡು ಎದುರುದಾರರ ಮನೆಯಿಂದ ಹೋಗಿದ್ದೇನೆ ಎಂದು ನನ್ನ ಅರ್ಜಿಯಲ್ಲಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ಜಗಳ ಮಾಡಿಕೊಂಡು ಹೋಗಿರುವುದಿಲ್ಲ. ಎದುರುದಾರರು ನನಗೆ ಹೊಡೆದಿದ್ದರಿಂದ ನಾನು ಆಸ್ಪತ್ರೆಗೆ ಹೋಗಿ ನಮ್ಮ ಪೋಷಕರ ಮನೆಗೆ ಹೋಗಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಚಿಕಿತ್ಸೆ ಪಡೆದುಕೊಂಡ ಬಗ್ಗೆ ರಶೀದಿಗಳನ್ನು

ಹಾಜರುಪಡಿಸಿರುತ್ತೇನೆ. ಮದುವೆ ಸಂದರ್ದದಲ್ಲಿ ಎದುರುದಾರರು ಖಾಸಗಿ ಕೆಲಸ ಅಂದರೆ ಟೊಯೊಟದಲ್ಲಿ ಕೆಲಸ ಮಾಡುತ್ತಿದ್ದರು. ನಾನು ಎದುರುದಾರರಿಗೆ ಸಾಕಷ್ಟು ವೇತನ ಇದೆ ಎಂದು ಮದುವೆ ಆಗಿರುತ್ತೇನೆ ಎಂದರೆ ಸರಿಯಲ್ಲ. ಮದುವೆ ಮಾಡಿಕೊಂಡು ಒಂದು ವಾರಕ್ಕೆ ನಾನು ಎದುರುದಾರರಿಗೆ ಬೆಂಗಳೂರಿನಲ್ಲಿ ಪ್ರತ್ಯೇಕ ಮನೆಮಾಡಿಕೊಡಬೇಕೆಂದು ಒತ್ತಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರ ಅದಕ್ಕೆ ಆಗಲ್ಲ ಎಂದು ತಿಳಿಸಿದ್ದರಿಂದ ನಾನು ಅವರ ಜೊತೆ ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರರಿಗೆ ನಾನು ಅವರ ಸಂಬಳವನ್ನು ನನಗೆ ಕೊಡಬೇಕು ಮತ್ತು ನನ್ನ ಬ್ಯಾಂಕು ಖಾತೆಗೆ ಹಾಕಬೇಕು ಎಂದು ಒತ್ತಾಯಮಾಡುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರರ ತಂದೆ ತಾಯಿ ವಯೋವೃದ್ದರಾಗಿ ಕಾಯಿಲೆಯಿಂದ ಬಳಲುತ್ತಿದ್ದರು ನಾನು ಅವರನ್ನು ನೋಡಿಕೊಳ್ಳಲು ಅಸಹ್ಯ ಪಟ್ಟು ನೋಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರರ ತಾಯಿ ಕಾಲು ಅನಾರೋಗ್ಯದಿಂದ ಇದ್ದರಿಂದ ಅವರು ಕೆಲಸ ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೆ ಕೆಲಸವನ್ನು ಮಾಡುವುದಿಲ್ಲ ಎಂದು ತಿಳಿಸಿದ್ದೆ ಎಂದರೆ ಸರಿಯಲ್ಲ. ಮದುವೆ ಮಾಡಿಕೊಂಡು ಒಂದು ತಿಂಗಳಿಗೆ ನಾನು ಎದುರುದಾರರ ಜೊತೆ ಜಗಳ ಮಾಡಿಕೊಂಡಿದ್ದೆ ಆಗ ನಮ್ಮ ಊರಿನವರಾದ ಅಂದಿ ಅಂಕಯ್ಯ , ದೊಡ್ಡಯ್ಯ , ಪಟೇಲ್ ಕುಳ್ಳಪ್ಪ ಅವರು ಮಧ್ಯಸ್ಥಿಕೆ ವಹಿಸಿ ರಾಜಿ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಎದುರುದಾರರ ನನ್ನ ತಾಯಿಯ ಬಳಿ ಸೈಟು ತನ್ನ ಹೆಸರಿಗೆ ಬರಸಿಕೊಡು ಎಂದು ಕೇಳಿದ್ದರು ಆ ಬಗ್ಗೆ ಪಂಚಾಯಿತಿಯನ್ನು ಮಾಡಲಾಗಿತ್ತು ಎಂದು ತಿಳಿಸಿರುತ್ತಾರೆ. ನನ್ನ ತಾಯಿ ಹೆಸರಿನಲ್ಲಿ ಯಾವುದೆ ಸೈಟು ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2.** ದಿಃ **29.09.2015** ರಂದು ಎದುರುದಾರರು ತಮ್ಮ ವಕೀಲರ ಮೂಲಕ ನನಗೆ ನೋಟಿಸು ಕಳಿಸಿ ಅದರಲ್ಲಿ ನನ್ನ ಜೊತೆ ಬಂದು ಜೀವನ ಮಾಡು ಎಂದು ತಿಳಿಸಿರುತ್ತಾರೆ

ಎಂದರೆ ಸರಿಯಲ್ಲ. ನಂತರ ನಾನು ಕೆ.ಎಂ ದೊಡ್ಡಿ ಪೊಲೀಸ್ ಠಾಣೆಗೆ ಹೋಗಿ ಎದುರುದಾರರ ವಿರುದ್ದದೂರನ್ನು ನೀಡಿದ್ದೇನೆ ಎಂದರೆ ದೂರನ್ನು ನೀಡಿರುವುದು ನಿಜ ಎಂದು ನುಡಿದಿರುತ್ತಾರೆ. ಪೊಲೀಸರು ನನ್ನನ್ನು ಮತ್ತು ಎದುರುದಾರರನ್ನು ಕರಸಿ ತಿಳುವಳಿಕೆ ಹೇಳಿ ಕಳಿಸಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಊರಿನವರು ಮತ್ತು ಅವರ ಊರಿನವರು ಮದುವೆ ಮುರಿಯುವುದು ಬೇಡ ಎಂದು ಉಪದೇಶ ಮಾಡಿದ್ದರು ಎಂದು ನುಡಿದಿರುತ್ತಾರೆ. ನಾನು ಎದುರುದಾರರಿಗೆ ಪ್ರತ್ಯೇಕ ಮನೆ ಮಾಡದಿದ್ದರೆ ನಾನು ಬರುವುದಿಲ್ಲ ಎಂದು ಹೇಳಿ ನಾನೆ ಅವರನ್ನು ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ.

**3.** ಮದ್ದೂರು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಎಂ ಸಿ **23/16** ನ್ನು ಹಾಕಿರುತ್ತೇನೆ ಎಂದರೆ ಸರಿ. ದಿಃ **9.1.2018** ರಂದು ಸದರಿ ಅರ್ಜಿಯನ್ನು ನಾನು ಹಿಂದಕ್ಕೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಅದೆ ನ್ಯಾಯಾಲಯದಲ್ಲಿ ಎದುರುದಾರರು ಎಂ ಸಿ ನಂ **37/18** ನ್ನು ಹಾಕಿದು ಸದರಿ ಪ್ರಕರಣದಲ್ಲಿ ನ್ಯಾಯಾಲಯವು ನಾನು ಅರ್ಜಿದಾರರುಂದಿಗೆ ಹೋಗಿ ಜೀವನ ಮಾಡಬೇಕು ಎಂದು ಆದೇಶ ಆಗಿದ್ದರು ನಾನು ಹೋಗಿ ಜೀವನ ಮಾಡಿರುವುದಿಲ್ಲ ಎಂದರೆ ಎದುರುದಾರರು ನನ್ನನು ಕರೆದುಕೊಂಡು ಹೋಗಿರುವುದಿಲ್ಲ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ**

ಪ್ರಧಾನ ಸಿವಿಲ್ **ಮತ್ತು ಜೆಎಂಎಫ್‌ಸಿ, ಮಳವಳ್ಳಿ**